Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 Zone 1, R. I. Dist. 3182 Charter Date : 04-03-1986



Rtn. Francesco Arezzo
RI President




Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor



40h year of Service and Fellowship

Volume 40 Issue - 17 30th October 2025

Chief guest :
**Mr. Nihal Shetty**

Topic :
**How to maintain a Car**
**Importance of PPS Polishing**

Time : 7.00 p.m.
Venue : Hotel Shivaprasad Grand, Kundapura

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

aaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaaa

## ಸಂಪಾದಕೀಯ :



ನನ್ನೊಲವಿನ ಮಿತ್ರರೇ,

ಶಿಶಿರದ ಮಳೆ ಹುಯ್ಯುತಿರಲು ಮನವು ಎಲ್ಲೋ ಯಾವುದೋ ಆಲೋಚನೆಯಲ್ಲಿ ಮುಳುಗಿರಲು, ಆಲೋಚನೆಯು ನಮ್ಮನ್ನು ಭವಿಷ್ಯದ ಇನ್ನೆಲ್ಲೋ ಪ್ರವಾಸಕ್ಕೆ ಕರೆದೊಯ್ಯುತ್ತಿತ್ತು. ಈಗೇಕೆ ಆ ನೆನಪು ಬಂದೆನ್ನ ಕಾಡಿದೆ? ಎದೆಯ ಆಳದಲ್ಲಿ ವಿಷಾದ ಮೂಡಿದೆ ಎಂಬ ಸಿ. ಅಶ್ವಥ್ ಅವರ ಹಾಡು ಪದೇ ಪದೇ ಮನದಲ್ಲಿ ಗುನುಗುಣಿಸುತ್ತಿತ್ತು. ಹೇಳಿಕೇಳಿ ವರ್ಷ ನನ್ನ ವರುಷ 50 ಆಗಿದೆ. ಯೋಚನೆಯ ವರ್ಷಧಾರೆ ಅದೆಷ್ಟು ಹರಿತವಾಗಿತ್ತೆಂದರೆ ಎಲ್ಲವೂ ಪ್ರಶ್ನಾರ್ಥಕವಾಗಿಯೇ ಇದ್ದಿತ್ತು. ಯಾವುದೂ ಅರ್ಥವಾಗುತ್ತಿರಲಿಲ್ಲ. ನಾನೇಕೆ ಹೀಗೇಕೆ ಆಡುತ್ತಿರುವೆ?, ಮನವೇಕೆ ಸದಾ ಭಯದಿಂದ ಕೂಡಿದೆ? ಎಂಬೆಲ್ಲಾ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಹೊರಟಂತೆ. ನಮ್ಮ ಮನೆಯ ಹಿರಿಯರೊಬ್ಬರು ಹೇಳಿದ ಮಾತು ಇಂದೂ ಕಿವಿಯಲ್ಲಿ ಅನುರಣಿಸುತ್ತಿದೆ “ಒನ್ಸ್ ಯು ರಿಟೈರ್ಡ್ ಯು ವಿಲ್ ಬಿ ನೋಬಡಿ” ಇದೊಂದು ರೀತಿ ನಮ್ಮಂತ ಉದ್ಯೋಗದಲ್ಲಿರುವವರಿಗೆ ಪಾಠ ಅಲ್ಲವೇ?. ಇಲ್ಲೇ ನಮಗೆ ರೋಟರಿ ಕ್ಲಬ್ ಎನ್ನುವುದು ನಿವೃತ್ತಿಯ ನಂತರದ ಏನು? ಎಂಬ ಪ್ರಶ್ನೆಗಳಿಗೆ ಉತ್ತರ. ನಮ್ಮನ್ನು ಸದಾ ಚಟುವಟಿಕೆಗಳಿಂದ ಲವಲವಿಕೆಯಿಂದ ಇರುವಂತೆ ಮಾಡುತ್ತದೆ. ಮನದಲ್ಲಿ ಸ್ಪರ್ಧಾತ್ಮಕ ಚಿಂತನೆಗಳು ಹೊಸದಾಗಿ ಮೂಡುವಂತೆ ನಮಗೇ ಅರಿವಿಲ್ಲದಂತೆ ಆಡುತ್ತೇವೆ. ನಮಗೆ ಮತ್ತೊಮ್ಮೆ ಪುನರ್ನವ ಎನ್ನುವಂತೆ ಆಲೋಚನೆಗಳಿಗೆ ಹೊಸ ದಾರಿ ಸಿಕ್ಕಿರುತ್ತದೆ. ಇಲ್ಲವಾದಲ್ಲಿ ನಾವು ಮಾನಸಿಕ ಖಿನ್ನತೆಗೆ ಒಳಗಾಗಿ ಏನಾಗುತ್ತೇವೋ ನಮಗೇ ಗೊತ್ತಿರುವುದಿಲ್ಲ. ನಿಜವಾಗಲೂ ಪ್ರಾಯ ಅರವತ್ತರ ನಂತರ ರೋಟರಿ ನಮಗೆ ಸಂಜೀವಿನಿ. “ಇರಬೇಕು ಇರುವಂತೆ ತೊರೆದು ಸಾವಿನ ಚಿಂತೆ ಮಳೆ ಸುರಿದು ಹಗುರಾದ ಮುಗಿಲಿನಂತೆ” – ನಮ್ಮ ರೋಟರಿಗಿದೋ ನೂರೊಂದು ವಂದನೆಗಳು.

**– ರೊ. ರಮಾನಂದ ಕಾರಂತ್**

## ವಾರದ ಸಭೆಯ ವರದಿ




ತಾ। 23/10/2025 ಗುರುವಾರದಂದು ನಮ್ಮ ರೋಟರಿ ಕ್ಲಬ್‌ನ ವಾರದ ಸಭೆಗೆ ಲಕ್ಷ್ಮಿ ಸೋಮ ಬಂಗೇರ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ರಾಜೇಂದ್ರ ನಾಯಕ್ ಅವರು ಅತಿಥಿಗಳಾಗಿ ಆಗಮಿಸಿ, “ಸಮಾಜ ಸೇವೆಯಲ್ಲಿ ಸಂಘ ಸಂಸ್ಥೆಗಳ ಪಾತ್ರ” ಎಂಬ ವಿಚಾರದಲ್ಲಿ ಉಪನ್ಯಾಸವನ್ನು ನೀಡಿದರು. ಶ್ರೀಯುತರು ತಮ್ಮ ಮಾತುಗಳಲ್ಲಿ ಸೇವೆ ಹೇಗಿರಬೇಕು? ನಮ್ಮ ಸೇವೆ ಯಾರಿಗೆ ತಲುಪಬೇಕು, ಪದ್ಮಶ್ರೀ ಪುರಸ್ಕೃತ ‘ಹರೇಕಳ ಹಾಜಬ್ಬ’ ‘ಕಾರವಾರದ ತುಳಸೀ ಗೌಡ’ ಇವರನ್ನು ಉದಾಹರಿಸಿ ಮಾತನಾಡಿದರು. ಆಗಮಿಸಿದ ಸರ್ವರನ್ನೂ ಅಧ್ಯಕ್ಷ ರೊ. ಸಚಿನ್ ನಕ್ಕತ್ತಾಯ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ತಾ ವಾರದ ವರದಿ ವಾಚಿಸಿದರು. ರೊ. ಸೀತಾರಾಮ ನಕ್ಕತ್ತಾಯ ವಾರದ ಚಿಂತನೆ ಮಂಡಿಸಿದರು. ರೊ. ವಾಸುದೇವ ಕಾರಂತ್ ರೋಟರಿ ಮಾಹಿತಿ ತಿಳಿಸಿದರು. ರೊ. ಕೆ.ಕೆ. ಕಾಂಚನ್ ಮುಖ್ಯ ಅತಿಥಿಗಳ ಪರಿಚಯ ಮಾಡಿದರು. ರೊ. ಶ್ರೀನಿವಾಸ ಶೇಟ್ ಪ್ರಾರ್ಥನೆ ನೆರವೇರಿಸಿದರು. ರೊ. ರಮಾನಂದ ಕಾರಂತ್ ಕಾರ್ಯಕ್ರಮದ ಕೊನೆಯಲ್ಲಿ ಹಾಸ್ಯ ನಡೆಸಿಕೊಟ್ಟರು. ಧನ್ಯವಾದವನ್ನು ರೊ. ಸತ್ಯನಾರಾಯಣ ಪುರಾಣಿಕ್ ನೆರವೇರಿಸಿದರು.

## Rotary Information

### The Genealogy of the Rotary Clubs

The knowlege of the ancestral history or lineage of each Rotary club is very important to know by its members. It is very essential to document the name of the sponsoring club in the district directory or in the club website

**Genealogy of our club is as follows** :

RC Madras(1929) sponsored RC Nilgris in 1941

RC Nilgiris sponsored RC Coimbatore in 1943
RC Coimbatore sponsored RC Mangalore in 1949
RC Mangalore sponsored RC Udupi Manipal in 1958
RC Udupi Manipal sponsored RC Kundapura in 1960
RC Kundapura sponsored our club ie RC Kundapura South in 1980 .

Hence Genealogy of our club starts from RC Madras.

## ಹುಟ್ಟುಹಬ್ಬದ ಶುಭಾಶಯಗಳು



**ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ**
**ದಿನಾಂಕ : ನವೆಂಬರ್ 1**
**ಮೊಬೈಲ್ : 98450 97362**



**ರೊ. ಜಿ. ಶ್ರೀಧರ್ ಶೆಟ್ಟಿ**
**ದಿನಾಂಕ : ನವೆಂಬರ್ 5**
**ಮೊಬೈಲ್ : 94490 39300**



ತಾ. 25 ಶನಿವಾರ ನಮ್ಮ ರೋಟರಿ ಕ್ಲಬ್‌ನ ಸದಸ್ಯರಾದ ರೊ. ಔಝ್ವಿನ್ ರೆಬೆಲ್ಲೋ ಅವರ ಪುತ್ರ ರಾಹುಲ್ ಅವರ ವಿವಾಹ ಮಹೋತ್ಸವವು ಐನಿ ಕಾರ್ಡಿನ್ ಅವರೊಂದಿಗೆ ವಿಜೃಂಭಣೆಯಿಂದ ನೆರವೇರಿರುತ್ತದೆ.
ತಮ್ಮ ಸಮಸ್ತ ಕುಟುಂಬಕ್ಕೆ ಅಭಿನಂದನೆಗಳನ್ನು ತಿಳಿಸುತ್ತಿದ್ದೇವೆ

**ಕನ್ನಡ ನನ್ನ ಕನಸು, ಕನ್ನಡ ನನ್ನ ಮನಸ್ಸು, ಕನ್ನಡಿಗನೆಂಬ ಹೆಮ್ಮೆ ಸೊಗಸು,**
**ನಮ್ಮಲ್ಲಿ ಕನ್ನಡವನ್ನು ಉಳಿಸು, ಎಲ್ಲೆಲ್ಲೂ ಕನ್ನಡವನ್ನು ಬೆಳೆಸು.**
**ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು**

## ಶಂಕರಾಚಾರ್ಯರ ವಿವೇಕ ಚೂಡಾಮಣಿಗೆ ಸ್ವಾಮಿ ರಂಗನಾಥಾನಂದರ ದೃಷ್ಟಾಂತಗಳು–90

ಐದನೆಯ ಪ್ರಶ್ನೆಗೆ ಉತ್ತರ: ಯಾವುದು ಅನಾತ್ಮ?

ದೋಷೇಣ ತೀವ್ರೋ ವಿಷಯಃ ಕೃಷ್ಣಸರ್ಪವಿಷಾದಪಿ।
ವಿಷಂನಿಹಂತಿಭೋಕ್ತಾರಂ ದ್ರಷ್ಟಾರಂ
ಚಕ್ಷುಷಾಪ್ಯಯಂ ॥77॥

ಇಂದ್ರಿಯದ ವಿಷಯವು ದೋಷದಲ್ಲಿ ಕಾಳಸರ್ಪದ ವಿಷಕ್ಕಿಂತಲೂ ತೀಕ್ಷ್ಣವಾಗಿರುವುದು. ವಿಷವಾದರೋ ತಿನ್ನುವವನನ್ನು ಮಾತ್ರ ಕೊಲ್ಲುತ್ತದೆ. ಆದರೆ ಈ ವಿಷಯವು ಕಣ್ಣಿನಿಂದ ನೋಡುವವನನ್ನೂ ಕೂಡ ಕೊಲ್ಲುತ್ತದೆ.

ಇಂದ್ರಿಯ ವಸ್ತುಗಳು ದುಷ್ಪರಿಣಾಮಕಾರಕ ದೃಷ್ಟಿಯಿಂದ ಕಾಳಸರ್ಪಕ್ಕಿಂತಲೂ ಮಾರಣಾಂತಿಕವಾಗಿರುತ್ತವೆ. ಇದು ಏಕೆಂದರೆ ವಿಷವು ಕೇವಲ ಅದನ್ನು ತೆಗೆದುಕೊಳ್ಳುವವನನ್ನು ಕೊಲ್ಲುತ್ತದೆ. ಆದರೆ ಇಂದ್ರಿಯ ವಸ್ತುಗಳು ಅವುಗಳನ್ನು ಕಣ್ಣಿನಿಂದ ಯಾರು ನೋಡುವರೋ ಅವರನ್ನೂ ನಾಶಮಾಡುತ್ತದೆ. ಇಂದ್ರಿಯ ಪ್ರಪಂಚವು ನಮ್ಮ ಗಮನವನ್ನು ಯಾವಾಗಲೂ ಬೇರೆಡೆ ಹರಿಸಿ ಮನಸ್ಸನ್ನು ಗೊಂದಲಗೊಳಿಸುತ್ತಿರುತ್ತದೆ. ಆದ್ದರಿಂದ ನಾವು ಬಹಳ ಶಿಸ್ತಿನಿಂದ ಇದ್ದು ನಮ್ಮನ್ನು ಈ ಗೊಂದಲಗಳಿಂದ ರಕ್ಷಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ನಾವು ದುಃಖ ಅನುಭವಿಸಲೇ ಬೇಕಾಗುತ್ತದೆ. ಕಾರಣವೆಂದರೆ ಇಂದ್ರಿಯ ಪ್ರಪಂಚವು ನಮ್ಮನ್ನು ಕಣ್ಣು ಮಿಟುಕಿಸುವುದರೊಳಗೆ ಮುಗಿಸಿ ಬಿಡುತ್ತದೆ. ಕಾಳಸರ್ಪದ ವಿಷವು ಕೆಲಸ ಮಾಡಲು, ಮೊದಲು ಹಾವು ಕಚ್ಚಬೇಕು, ನಂತರ ವಿಷವು ದೇಹದೊಳಗೆ ಸೇರಿ ರಕ್ತ ಕಲುಷಿತವಾಗಬೇಕು, ಆದರೆ ಇಂದ್ರಿಯ ಪ್ರಪಂಚದ ವಿಷವು ಎಷ್ಟು ಅಪಾಯವೆಂದರೆ, ನಾವು ನೋಡಿದ ತಕ್ಷಣ ನಮ್ಮ ಸರ್ವನಾಶವಾಗುತ್ತದೆ. ಇದೇ ಇಂದ್ರಿಯ ಪ್ರಪಂಚದ ಸ್ವಭಾವ. ಹಿಂದೆ ಹೇಳಿದಂತೆ, ಸೂಪರ್ ಬಝಾರ್‌ಗಳಲ್ಲಿ ಆಗುವ ಕಳ್ಳತನಗಳು. ಸುಂದರವಾದ ವಸ್ತುಗಳು ಜನರನ್ನು ಆಕರ್ಷಿಸುತ್ತವೆ. ಜನರು ಅದನ್ನು ಕದ್ದು ತಮ್ಮದಾಗಿಸಿಕೊಳ್ಳುವ ಪ್ರಲೋಭನೆಗೊಳಗಾಗುತ್ತಾರೆ. ಆ ವಸ್ತುವು ಗ್ರಾಹಕನನ್ನು ತನ್ನೆಡೆಗೆ ಸೆಳೆಯುತ್ತದೆ. ಆತ ಅದನ್ನು ದೂರದಿಂದ ಕೇವಲ ತನ್ನ ಕಣ್ಣಿನಿಂದ ನೋಡಿದನಷ್ಟೆ, ಅದರ ವಿಷಪೂರಿತ ಝಳಪಿಗೆ ಬಲಿಪಶು ವಾಗುತ್ತಾನೆ. ಈ ಕ್ರಿಯೆ ಒಂದು ಚಿಟಿಕೆ ಹೊಡೆಯುವ ಸಮಯದಲ್ಲಿ ನಡೆದು ಹೋಗಿರುತ್ತದೆ. ಆದರೆ ಹಾವು ತನ್ನ ರಕ್ಷಣೆಗೆ ಸಮಸ್ಯೆಯಾಗಿದೆ ಎಂದು ಅರಿತು ಕಚ್ಚಬೇಕು. ನಂತರ ಆ ವಿಷ ದೇಹದೊಳಗೆ ಹೋಗಿ ಸಾವು ಸಂಭವಿಸುತ್ತದೆ. ಆದರೆ ಇಂದ್ರಿಯ ವಸ್ತುಗಳನ್ನು ನೋಡಿದೊಡನೆಯೇ ಅವು ನಮ್ಮನ್ನು ಸಾಯಿಸಿರುತ್ತವೆ. ನಾವು ಈ ರೀತಿಯ ಹಲವು ನಿದರ್ಶನಗಳನ್ನು ನಮ್ಮ ಜೀವನದಲ್ಲಿ ಪ್ರತಿದಿನ ನೋಡುತ್ತಿರುತ್ತೇವೆ. ಈಗ ಯಾರು ಈ ಬಗೆಯ ಭಯಾನಕ ಇಂದ್ರಿಯ ಬಂಧವನ್ನು ಕಳಚಿಕೊಂಡಿರು ವರೋ ಅವರು ವಿಮೋಚನೆ ಪಡೆಯಲು ಅರ್ಹರು. ಇದರ ಬಗ್ಗೆ ಮುಂದಿನ ಶ್ಲೋಕದಲ್ಲಿ ವಿವರಿಸಲಾಗಿದೆ.

ಸದಾಶಿವ ಸಮಾರಂಭಾಮ್ ಶಂಕರಾಚಾರ್ಯ
ಮಧ್ಯಮಾಮ್।*ಅಸ್ಮದಾಚಾರ್ಯ ಪರ್ಯಂತಾಮ್
ವಂದೇ ಗುರುಪರಂಪರಾಮ್॥
ಶ್ರೀ ಗುರುಚರಣಾರವಿಂದಾರ್ಪಣಮಸ್ತು...

ಮುಂದುವರಿಯುವುದು......


Rtn. Dr. S. N. Padiyar
1985-86 & 1986-87


Rtn. B. Arun Kumar Shetty
1987-88


Rtn. Dr. H. Rammohan
1988-89


Rtn. K. Shridhar Kamath
1989-90


Rtn. Dr. Anand Nayak
1990-91


Rtn. B. Ramachandra Prabhu
1991-92


Rtn. G. Santhosh Kumar Shetty
1992-93


Rtn. Dr. H. A. Vishweshwar
1993-94


Rtn. Dr. H. R. Hebbar
1994-95


Rtn. K. T. Surendranath
1995-96


Rtn. S. Sadananda Chatra
1996-97


Rtn. B. C. Somayaji
1997-98


Rtn. K. Suresh Kamath
1998-99


Rtn. S. Subraya Halambi
1999-2000


Rtn. S. Vijaya Shetty
2000-01


Rtn. K. Seetharama Nackathaya
2001-02


Rtn. U. S. Shenoy
2002-03



Rtn. Dr. Umesh Puthran
2003-04


Rtn. Dr. B. V. Udupa
2004-05


Rtn. A. Shantharam Pai
2005-06


Rtn. K. Shantharam Prabhu
2006-07

# ದೃಢ ಸಂಕಲ್ಪ



ಶ್ರೀ ಭಗವಾನ್ ಬುದ್ಧ ಬಿಹಾರದ ಬೆಟ್ಟವೊಂದರ ಮೇಲೆ ತನ್ನ ಶಿಷ್ಯರೊಂದಿಗೆ ಕುಳಿತು ಚರ್ಚಿಸುತ್ತಿದ್ದ. ಆಗ ಒಬ್ಬ ಶಿಷ್ಯ "ಭಗವಾನ್ ಈ ಬೆಟ್ಟಕ್ಕಿಂತ ಕಠಿಣವಾದ ಶಕ್ತಿಶಾಲಿಯಾದ ಬೇರೆ ವಸ್ತು ಉಂಟೇ?' ಎಂದು ಕೇಳಿದ. ಬುದ್ಧ "ಹೌದು ಇದೆ! ಬೆಟ್ಟಕ್ಕಿಂತ ಶಕ್ತಿಶಾಲಿಯಾದುದು ಕಬ್ಬಿಣ. ಈ ಕಲ್ಲು ಬಂಡೆಯನ್ನು ತುಂಡು ತುಂಡು ಮಾಡುವಂತಹ ಶಕ್ತಿ ಕಬ್ಬಿಣಕ್ಕಿದೆ' ಎಂದ.

ಶಿಷ್ಯ ಮತ್ತೆ "ಹಾಗಾದರೆ ಕಬ್ಬಿಣಕ್ಕಿಂತ ಶಕ್ತಿಶಾಲಿಯಾದುದು ಬೇರೇನಿದೆ?' ಎಂದು ಪ್ರಶ್ನಿಸಿದ. ಬುದ್ಧ– "ಕಬ್ಬಿಣಕ್ಕಿಂತಲೂ ಶಕ್ತಿಶಾಲಿಯಾದುದು ಅಗ್ನಿ. ಅದು ಕಬ್ಬಿಣವನ್ನು ತನ್ನ ಪ್ರಖರತೆಯಿಂದ ಕರಗಿಸಿ ನೀರಾಗಿಸಿ ಬಿಡುತ್ತದೆ' ಎಂದ. ಮತ್ತೆ

ಶಿಷ್ಯ "ಹಾಗಾದರೆ ಭಗವಾನ್ ಅಗ್ನಿಯ ಶಕ್ತಿಯನ್ನು ಅಡಗಿಸುವಂತಹ ಶಕ್ತಿಶಾಲಿಯಾದ ವಸ್ತು ಬೇರೆ ಇನ್ಯಾವುದಿದೆ?' ಎಂದು ಕೇಳಿದ. ಬುದ್ಧ "ಅಗ್ನಿಗಿಂತ ಶಕ್ತಿಶಾಲಿ ಎಂದರೆ ನೀರು. ಅದು ಅಗ್ನಿಯನ್ನು ಜ್ಯೋತಿಹೀನವನ್ನಾಗಿ ಮಾರ್ಪಡಿಸುತ್ತದೆ. ಅಗ್ನಿಯ ಪ್ರಖರತೆಯನ್ನು ಸಂಪೂರ್ಣವಾಗಿ ತಣ್ಣಗಾಗಿಸಿಬಿಡುತ್ತದೆ' ಎಂದಾಗ ಶಿಷ್ಯನ ಜ್ಞಾನದಾಹ ಇನ್ನೂ ಹಿಂಗಿರಲಿಲ್ಲ.

ಅವನು ತಾನು ಏನು ಕೇಳಿದರೂ ಅದಕ್ಕಿಂತ ಶಕ್ತಿಶಾಲಿಯಾದುದು ಇನ್ನೂ ಇದೆಯಲ್ಲ ಎಂದು ಯೋಚಿಸುತ್ತ "ಭಗವಾನ್ ನೀರಿಗಿಂತ ಶಕ್ತಿಶಾಲಿಯಾದುದು ಇನ್ಯಾವುದಾದರೂ ವಸ್ತು ಇದೆಯೇ?' ಎಂದು ಕೇಳಿದ. ಅದಕ್ಕೆ ಭಗವಾನ್ ಮುಗುಳುನಗೆ ಬೀರುತ್ತ "ಶಿಷ್ಯನೇ ನೀರಿಗಿಂತ ಬಲಿಷ್ಠವಾದ ವಸ್ತು ಕೂಡಾ ಇದೆ. ಅದೇ ಗಾಳಿ. ಗಾಳಿ ತನ್ನ ಪ್ರಬಲವಾದ ವೇಗದಿಂದ ನೀರು ಹರಿಯುವ ದಿಕ್ಕನ್ನೇ ಬದಲಿಸಬಲ್ಲದು' ಎಂದ. ಶಿಷ್ಯನ ಕುತೂಹಲಕ್ಕೆ ಮೇರೆ ಇಲ್ಲದಾಯಿತು. ಅವನು ಮತ್ತೆ "ಭಗವಾನ್ ಗಾಳಿಯ ಮೇಲೂ ವಿಜಯ ಸಾಧಿಸಬಲ್ಲ ಶಕ್ತಿ ಯಾವುದು? ದಯವಿಟ್ಟು ತಿಳಿಸುವ ಕೃಪೆ ಮಾಡಬೇಕು' ಎಂದ. ಅದಕ್ಕೆ ಬುದ್ಧ "ಎಲೈ ಶಿಷ್ಯನೇ! ಎಲ್ಲಕ್ಕಿಂತ ಮಿಗಿಲಾದುದು ಮಾನವ ಸಂಕಲ್ಪವಾಗಿದೆ. ಸಂಕಲ್ಪ ಶಕ್ತಿ ಎಲ್ಲದರ ಮೇಲೆ ಅಧಿಕಾರ ಚಲಾಯಿಸುವ ಮಾನವನ ಬತ್ತಳಿಕೆಯಲ್ಲಿರುವ ಬಾಣ! ಮಾನವ ತನ್ನ ಸಂಕಲ್ಪ ಶಕ್ತಿಯಿಂದ ನೀರಿನ ಮೇಲೆ ನಡೆಯಬಲ್ಲ, ಆಕಾಶದಲ್ಲಿ ಹಾರಾಡಬಲ್ಲ. ಅಷ್ಟೇ ಅಲ್ಲ ತನ್ನ ಮನೋಬಲದಿಂದ ಎಂತಹ ಕಠಿಣವಾದ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಬಲ್ಲ. ಮಾನವನ ಈ ದೃಢ ಸಂಕಲ್ಪವೇ ಅವನನ್ನು ಮನುಷ್ಯನಿಂದ ದೇವನ ಪ್ರತಿರೂಪವಾಗಿ ಪರಿವರ್ತನೆ ಮಾಡಿದೆ' ಎಂದು ಸಮರ್ಥನೆ ನೀಡಿದಾಗ ಶಿಷ್ಯ ಸಂಪ್ರೀತನಾಗಿ ಬುದ್ಧನಿಗೆ ವಂದಿಸಿದ.

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

*This Bulletin is sponsored by :*

**Rtn. Loy Carvalho**
**Mob. : 9343090441**

For Private Circulation only

Email id – rotaryclub.kundapurasouth@gmail.com


Rtn. T. Raghavendra Hatwar
2007-08


Rtn. K. Shankar
2008-09


Rtn. S. Jayakar Shetty
2009-10


Rtn. K. K. Kanchan
2010-11


Rtn. Abhinandan A. Shetty
2011-12


Rtn. Vivian Crasto
2012-13


Rtn. G. Shreedhar Shetty
2013-14


Rtn. K. P. Bhat
2014-15


Rtn. P. Vasudeva Karanth
2015-16


Rtn. Aouzline F. Rebello
2016-17


Rtn. J. Srinath Rao
2017-18


Rtn. Johnson D' Almeida
2018-19


Rtn.Devaraj
2019-20


Rtn. Dr. Uttam Kumar Shetty
2020-21


Rtn.Mahendr Shetty
2021-22


Rtn.Sathyanarayana Puranik
2022-23


Rtn.Suresh Mallya
2023-24


Rtn. Judith Mendonca
2024-25